

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮಠ-ಮಂದಿರಗಳು ಮತ್ತು ಧಾರ್ಮಿಕ ಶ್ರದ್ಧೆ

ಇತ್ತೀಚೆಗೆ ಹಳ್ಳಿಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ದೇವಾಲಯಗಳು ನಿರ್ಮಾಣಗೊಳ್ಳುತ್ತಿವೆ. ಹಳೆಯ ದೇವಾಲಯಗಳು ಜೀರ್ಣೋದ್ಧಾರಗೊಳ್ಳುತ್ತಿರುವುದಲ್ಲದೆ ಹೊಸ ಹೊಸ ದೇವಾಲಯಗಳೂ ಸ್ಥಾಪನೆಯಾಗುತ್ತಿವೆ. ಜನರ ನಂಬುಗೆಗೆ ಅನುಗುಣವಾಗಿ ಒಂದು ಹಳ್ಳಿಯಲ್ಲಿ ಒಂದಲ್ಲ ಅನೇಕ ದೇವಾಲಯಗಳು. ಮನುಷ್ಯನನ್ನು ನಿರ್ಮಾಣಮಾಡಿದ ದೇವರಿಗೂ ಮತೀಯ ಸೋಂಕು. ಇದು ಈ ಜನಾಂಗದವರ ದೇವರು, ಅದು ಆ ಜನಾಂಗದವರ ದೇವರು. ಇದು ಮುಂದುವರಿದ ಜನಾಂಗದವರ ದೇವರು; ಅದು ಹಿಂದುಳಿದ ಜನಾಂಗದವರ ದೇವರು. ಹೀಗೆ ಆಯಾಯ ಜನಾಂಗದವರ ಸಾಮಾಜಿಕ ಸ್ಥಾನಮಾನಕ್ಕನುಗುಣವಾಗಿ ದೇವರ ಸ್ಥಾನಮಾನ! ಹಳ್ಳಿಗಳಲ್ಲಿರುವ ದೇವಾಲಯಗಳ ಹೆಸರುಗಳಿಂದ ಯಾವ ಯಾವ ಜನಾಂಗದವರು ಆ ಹಳ್ಳಿಯಲ್ಲಿ ವಾಸವಾಗಿದ್ದಾರೆಂದು ಸುಲಭವಾಗಿ ಹೇಳಬಹುದು. ಆ ಜನಾಂಗದವರ ಓಟುಗಳನ್ನು ಗಿಟ್ಟಿಸಿಕೊಳ್ಳುವ ಸಲುವಾಗಿ ಚುನಾವಣೆಗಳ ಸಂದರ್ಭದಲ್ಲಿ ರಾಜಕಾರಣಿಗಳಿಂದ ಗುಡಿಗುಂಡಾರಗಳ ನಿರ್ಮಾಣಕ್ಕೆ ಧಾರಾಳವಾಗಿ 'ಕಪ್ಪಕಾಣಿಕೆ'! ಅರ್ಧಕ್ಕೇ ನಿಂತಿದ್ದ ಗುಡಿಯನ್ನು ಕಟ್ಟಿಪೂರೈಸಲು 'ಯಾರು ಹೆಚ್ಚು ಹಣವನ್ನು ಕೊಡುತ್ತಾರೋ ಅವರೇ ಅಧ್ಯಕ್ಷರು' ಎಂದು ಗುಡಿಯ ಎದುರಿಗೇ ಎಲ್ಲ ರಾಜಕೀಯಪಕ್ಷದವರೂ ಒಪ್ಪಂದ ಮಾಡಿಕೊಂಡು ಗ್ರಾಮಪಂಚಾಯಿತಿ ಅಧ್ಯಕ್ಷ ಸ್ಥಾನವನ್ನು ಹರಾಜು ಹಾಕಿದ ಹಳ್ಳಿಯ ಉದಾಹರಣೆಯನ್ನು ಈ ಅಂಕಣದಲ್ಲಿ ಹಿಂದೆ ಬರೆಯಲಾಗಿದೆ.

ದಾರಿಬೀದಿಗಳಲ್ಲಿ ಕಾಣಬರುತ್ತಿರುವ ದೇವಾಲಯಗಳ ನಿರ್ಮಾಣ ನಿನ್ನೆ ಮೊನ್ನೆಯದಲ್ಲ. ಕಾಲಿಡಲು ಜಾಗವೇ ಇಲ್ಲದಷ್ಟು ದೇವಾಲಯಗಳು ಇವೆ ಎಂದು ಶತಮಾನಗಳ ಹಿಂದೆಯೇ ಬಸವಣ್ಣನವರು ಹೇಳಿದ್ದಾರೆ: 'ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ! ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೊ! ದೈವ ದೈವವೆಂದು ಕಾಲಿಡಲಿಂಬಿಲ್ಲ!..' ದೇವರು ಎಲ್ಲೆಡೆ ಇದ್ದಾನೆ, ಅವನು ಇಲ್ಲದ ಜಾಗವೇ ಇಲ್ಲ ಎಂದ ಮೇಲೆ ಈ ಆಕ್ಷೇಪಣೆ ಸರಿಯೇ? 'ಎತ್ತೆತ್ತ ನೋಡಿದೊಡತ್ತತ್ತ ನೀನೇ ದೇವಾ, ಸಕಲವಿಸ್ತಾರದ ರೂಹು ನೀನೇ ದೇವಾ..' ಎನ್ನುವ ಬಸವಣ್ಣನವರು ಇಲ್ಲಿ ಆಕ್ಷೇಪಿಸಿರುವುದು ಬಹುದೇವತಾ ಉಪಾಸನೆಯನ್ನೇ ಹೊರತು, ಏಕದೇವತಾ ಉಪಾಸನೆಯನ್ನಲ್ಲ. 'ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ, ಒಬ್ಬನೆ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ! ಕೂಡಲಸಂಗಮ ದೇವನಲ್ಲದೆ ಇಲ್ಲೆಂದಿತ್ತು ವೇದ' ಎಂದು ಇನ್ನೊಂದೆಡೆ ಸ್ಪಷ್ಟವಾಗಿ ಹೇಳಿರುತ್ತಾರೆ.

ದೇವಾಲಯಗಳು ಹೆಚ್ಚು ಹೆಚ್ಚು ನಿರ್ಮಾಣಗೊಳ್ಳುತ್ತಿರುವುದು ಹೆಚ್ಚುತ್ತಿರುವ ಜನರ ಧಾರ್ಮಿಕ ಒಲವು ಎನ್ನಲಾದೀತೆ! ಜನರು ದೇವಾಲಯಗಳಿಗೇನೋ ಹೋಗುತ್ತಾರೆ. ಆದರೆ ಅವರ ಮನಸ್ಸು ಅಂತರ್ಮುಖಿಯಾಗುತ್ತಿಲ್ಲ; ಹೆಚ್ಚು ಹೆಚ್ಚು ಬಹಿರ್ಮುಖಿಯಾಗುತ್ತಿದೆ. ಗುಡಿಯೊಳಗೆ ಹೋಗಿ ದೇವರಿಗೆ ಅಡ್ಡಬೀಳುವ ಭಕ್ತನ ಮನಸ್ಸು ನೆನೆಯುವುದೇನನ್ನು? ಗುಡಿಯ ಹೊರಗೆ ಬಿಟ್ಟು ಬಂದ ಚಪ್ಪಲಿಗಳನ್ನು! 'ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ ನೋಡಾ' ಎಂದು ವ್ಯಂಗ್ಯವಾಡುತ್ತಾರೆ ಬಸವಣ್ಣನವರು. ಈಗಿನ ದೇವಾಲಯಗಳಲ್ಲಿ ಹೊರಗೆ ಚಪ್ಪಲಿಗಳನ್ನು ಸುರಕ್ಷಿತವಾಗಿ ಕಾಯುವ ವ್ಯವಸ್ಥೆ ಮಾಡಿರುವುದರಿಂದ ಆ ಚಿಂತೆ ಇಲ್ಲ. ಆದರೆ ಜನಜಾತ್ರೆಯಲ್ಲಿ ಜೇಬಿನಲ್ಲಿರುವ ಮೊಬೈಲ್ ಫೋನ್ ಎಗರಿಸದಂತೆ ಆ ದೇವರೇ ಕಾಪಾಡಬೇಕು!



ನಮ್ಮ ದೇಶದಲ್ಲಿ ಅನೇಕ ಸಂಪ್ರದಾಯಗಳಿವೆ; ನಾನಾ ಜಾತಿ ಧರ್ಮಗಳ ಜನರಿದ್ದಾರೆ. ಅವುಗಳಿಗೆ ಅನುಗುಣವಾಗಿ ಅನೇಕ ಮಠಗಳು ಮತ್ತು ದೇವಾಲಯಗಳಿವೆ. ಮನುಷ್ಯನಲ್ಲಿರುವ ಲೌಕಿಕ ಭಾವನೆಗಳನ್ನು ತೊಡೆದು ಹಾಕಿ ಅವನನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವುದೇ ಎಲ್ಲಾ ಧರ್ಮಗಳು ಮತ್ತು ಸಂಪ್ರದಾಯಗಳ ಮೂಲ ಆಶಯ. ಆದರೆ ವಿರೋಧಾಭಾಸವೆಂದರೆ ಮನುಷ್ಯನನ್ನು ಅಂತರ್ಮುಖಿಯಾಗಿಸಬೇಕಾದ ಧರ್ಮವೇ ಅವನನ್ನು ಬಹಿರ್ಮುಖಿಗೊಳಿಸುತ್ತಿದೆ, ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಆತ್ಮಸಾಕ್ಷಾತ್ಕಾರವೇ ಮೂಲ ಗುರಿಯಾದ ಧರ್ಮವು ಸಾಮಾಜಿಕ ಸಂಘರ್ಷಕ್ಕೆ ದುರ್ಬಳಕೆಯಾಗುತ್ತಿದೆ. ಮಠಗಳೂ ಸಹ ರಾಜಕೀಯಕ್ಕೆ ದುರ್ಬಳಕೆಯಾಗುತ್ತಿವೆ. ಅಲ್ಲಲ್ಲಿ ರಾಜಕೀಯ ಒಲವಿರುವ ಜಾಗೃತಿ ಸಮಾವೇಶಗಳು ಜರುಗುತ್ತಿವೆ. ರಾಜಕೀಯ ಬಲವೇ ತಮ್ಮ ಸಾಮಾಜಿಕ ಶಕ್ತಿ ಎಂದು ಸಮುದಾಯಗಳು ಭಾವಿಸಿ ಅದನ್ನು ಶತಾಯ ಗತಾಯ ಗಳಿಸಲು ಹೆಣಗುತ್ತಿವೆ; ಅದಕ್ಕಾಗಿ ಎಲ್ಲಿಲ್ಲದ ಪೈಪೋಟಿ ಏರ್ಪಟ್ಟಿದೆ. ತಮ್ಮ ಲೌಕಿಕ ಆಸೆ ಆಕಾಂಕ್ಷೆಗಳನ್ನು ಪೂರೈಸಲು ಮಠ-ಮಂದಿರಗಳು ಇವೆ ಎಂಬಂತಾಗಿದೆ.

ರಾಜಕೀಯ ಬಲವನ್ನು ಪಡೆಯಲು ಮಠ-ಮಂದಿರಗಳು ಮೆಟ್ಟಿಲುಗಳಾಗುತ್ತಿವೆ. ರಾಜಕೀಯ ಧುರೀಣರು ಮಠ-ಮಂದಿರಗಳಿಗೆ ಎಡತಾಕುವುದು ಆಧ್ಯಾತ್ಮಿಕ ಹಸಿವಿನಿಂದಂತೂ ಅಲ್ಲ. ಅವರಿಗೆ ಚುನಾವಣೆಯಲ್ಲಿ ಟಿಕೇಟು ಬೇಕು. ಅದಕ್ಕೆ ತನ್ನ ಜಾತಿಯ ಮಠಾಧೀಶರ ಕೃಪೆ ಬೇಕು. ಟಿಕೇಟು ದೊರೆತ ನಂತರ ಗೆಲ್ಲಲು ಗುರುಗಳು ತಮ್ಮ ಜಾತಿಯ ಜನರಿಗೆ ಮತ ಕೊಟ್ಟು ಗೆಲ್ಲಿಸುವಂತೆ ಹೇಳಬೇಕು. ಗೆದ್ದ ನಂತರ ಸಚಿವ ಸಂಪುಟದಲ್ಲಿ ಸ್ಥಾನ ದೊರೆಯಲು, ಅದರಲ್ಲೂ ಬಯಸಿದ ಖಾತೆ ದೊರೆಯಲು ಗುರುಗಳು ಶಿಫಾರಸ್ಸು ಮಾಡಬೇಕು. ಹೀಗೆ ಮಠವನ್ನು ತಮಗೆ ಬೇಕಾದಂತೆ ಬಗ್ಗಿಸಿ

ದುಡಿಸಿಕೊಳುವ ಜಾಣ್ಮೆ ಅವರಿಗೆ ಕರಗತವಾಗಿರುತ್ತದೆ. ಇಂದಿನ ಮಠ-ಪೀಠದ ಸ್ವಾಮಿಗಳ ಸ್ಥಿತಿ ಶ್ರೀಕೃಷ್ಣನ ಸ್ಥಿತಿಗಿಂತ ಭಿನ್ನವಾಗಿಯೇನೂ ಇಲ್ಲ. ಭಗವದ್ಗೀತೆಯಲ್ಲಿ ಬರುವ ಈ ಕೆಳಗಿನ ಶ್ಲೋಕವನ್ನು ಗಮನಿಸಿ:

**ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ - (ಭಗವದ್ಗೀತೆ 7.16)**

ದೇವರನ್ನು ಆರಾಧಿಸುವವರು ನಾಲ್ಕು ತೆರನಾಗಿರುತ್ತಾರೆ: 1) ಆರ್ತ, 2) ಜಿಜ್ಞಾಸು, 3) ಅರ್ಥಾರ್ಥೀ ಮತ್ತು 4) ಜ್ಞಾನೀ. ಆರ್ತ ಎಂದರೆ ದುಃಖಿಯಾದವನು; ಕಷ್ಟ ಕೋಟಲೆಗಳಿಗೆ ಸಿಲುಕಿದವನು ಅವುಗಳಿಂದ ಪಾರಾಗಲು ದೇವರ ಮೊರೆ ಹೋಗುತ್ತಾನೆ. **'ಸಂಕಟ ಬಂದಾಗ ವೆಂಕಟರಮಣ'** ಎಂಬ ಗಾದೆ ಮಾತೇ ಇದೆ. ಅರ್ಥಾರ್ಥಿ ಎಂದರೆ ಹಣದ ಹಿಂದೆ ಬಿದ್ದವನು. ಅವನೂ ದೇವರ ಮೊರೆಹೋಗುತ್ತಾನೆ - ಸಂಪತ್ತನ್ನು ಗಳಿಸಲು ಮತ್ತು ಗಳಿಸಿದ ಸಂಪತ್ತನ್ನು ಕಾಪಾಡಿಕೊಳ್ಳಲು. ಇನ್ನು ದೇವರ ಮೊರೆಹೋಗುವ ಆಧ್ಯಾತ್ಮಿಕ ಜಿಜ್ಞಾಸು ಮತ್ತು ಜ್ಞಾನಿಗಳನ್ನು ಕಾಣುವುದು ಬಲು ಅಪರೂಪವೇ!

ರಾಮಾಯಣದಲ್ಲಿ ಒಂದು ಪ್ರಸಂಗ ಬರುತ್ತದೆ. ಒಮ್ಮೆ ಕ್ಷತ್ರಿಯ ರಾಜನಾದ ವಿಶ್ವಾಮಿತ್ರನು ವಶಿಷ್ಠ ಮಹರ್ಷಿಗಳ ಆಶ್ರಮಕ್ಕೆ ಬರುತ್ತಾನೆ. ರಾಜನ ಆದರಾತಿಥ್ಯ ಮಾಡಲು ನೆರವಾದ ಮಹರ್ಷಿಗಳ ಕಾಮಧೇನು 'ಶಬಲೆ' ಎಂಬ ಹಸುವಿನ ಮೇಲೆ ವಿಶ್ವಾಮಿತ್ರನ ಕಣ್ಣು ಬೀಳುತ್ತದೆ. ಆ ಶಬಲೆಯನ್ನು ತನಗೆ ಕೊಟ್ಟರೆ ಒಂದು ಲಕ್ಷ ಗೋವುಗಳನ್ನು ಕೊಡುವುದಾಗಿ ಹೇಳುತ್ತಾನೆ. ಆದರೆ ವಶಿಷ್ಠರು ಒಪ್ಪುವುದಿಲ್ಲ. ಬಲವಂತವಾಗಿ ಶಬಲೆಯನ್ನು ಎಳೆದುಕೊಂಡು ಹೋಗಲು ಮುಂದಾದಾಗ ವಿಶ್ವಾಮಿತ್ರನು ಪ್ರಯೋಗಿಸಿದ ದಿವ್ಯಾಸ್ತ್ರಗಳೆಲ್ಲವೂ ವಶಿಷ್ಠರ ಬ್ರಹ್ಮದಂಡದ ಮುಂದೆ ನಿಷ್ಕ್ರಿಯವಾಗುತ್ತವೆ. ವಿಶ್ವಾಮಿತ್ರ ತಲೆಬಾಗಿ ಬ್ರಹ್ಮತೇಜಸ್ಸಿನ ಮುಂದೆ ಕ್ಷಾತ್ರತೇಜಸ್ಸು ಕಳಾಹೀನವೆಂದು ಹೀಗೆ ಉದ್ಗರಿಸುತ್ತಾನೆ: 'ಧಿಗ್‌ಬಲಂ ಕ್ಷತ್ರಿಯಬಲಂ! ಬ್ರಹ್ಮತೇಜೋ ಬಲಂ ಬಲಮ್!'

ಸಹೃದಯ ಓದುಗರೇ! ರಾಮಾಯಣ ಕಾಲದ ಈ ಮಾತು ಈಗ ತಿರುವುಮುರುವಾಗಿದೆ. ಇಂದು ಆಧ್ಯಾತ್ಮಿಕಬಲಕ್ಕಿಂತ ರಾಜಕೀಯಬಲವೇ ಬಲ ಎಂಬಂತಾಗಿದೆ. ಅದನ್ನು ಪಡೆಯಬೇಕೆಂಬುದೇ ಎಲ್ಲರ ತಾರಕಮಂತ್ರವಾಗಿದೆ!

10.5.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑